

ಸಾಹಿತ್ಯವಾಗಿ ನೋಡಬೇಕೋ ಅಥವಾ ಜೀವನ ಮತ್ತು ಸಾಹಿತ್ಯಗಳ ಸಂಬಂಧದ ನೆಲೆಗಟ್ಟಿನಲ್ಲಿ ನೋಡಬೇಕೋ ಎನ್ನುವುದು. ಖಚಿತವಾದ, ಅ-ಸಂಕೀರ್ಣವಾದ ಜೀವನಮೌಲ್ಯಗಳನ್ನು ಆರಿಸಿಕೊಂಡು ಅವುಗಳ ಲಕ್ಷ್ಮಣರೇಖೆಯೊಳಗೆ ಬದುಕಬಯಸುವ ವ್ಯಕ್ತಿಗಳನ್ನು, ಪಾತ್ರಗಳನ್ನು ಗೌರವಿಸುತ್ತಿದ್ದ ನಾಯಕರಿಗೆ ಒಂದು ನೆಲೆಯಲ್ಲಿ ಕಾರಂತರೂ ಇನ್ನೊಂದು ನೆಲೆಯಲ್ಲಿ ಕುವೆಂಪು ಅವರೂ ಆದರ್ಶವಾಗುವುದು ಸಹಜವೇ ಆಗಿತ್ತು. ಹಾಗೆಂದು ಅವರಿಬ್ಬರಿಂದಲೂ ವಿಮರ್ಶಕ-ದೂರವನ್ನು ಕಾಪಾಡಿಕೊಂಡು ಬರೆಯಲು ಅವರಿಗೆ ಸಾಧ್ಯವಾಯಿತು. ಅದರ ಜೊತೆಜೊತೆಗೇ ನವ್ಯರಿಂದ ದತ್ತವಾದ ಕಲಾಮೀಮಾಂಸೆಯು ಸಾಹಿತ್ಯದ ಆಕೃತಿಗೆ ನೀಡುವ ಮಹತ್ವವನ್ನು ಅವರು ಆವಾಹಿಸಿಕೊಂಡಿದ್ದರು. ಆದ್ದರಿಂದಲೇ ಆ ಹಿರಿಯ ಲೇಖಕರನ್ನು ಸಾರಾಸಗಟಾಗಿ ನೋಡುವುದು, ಪ್ರಶ್ನಿಸುವುದು ಅವರಿಗೆ ಆಗ ಸಹಜವಾಯಿತು. ಅವರು ಆಗ ಎತ್ತಿದ ಪ್ರಶ್ನೆಗಳು, ಎಷ್ಟೇ ಪ್ರಾಮಾಣಿಕವಾದರೂ ಈಗ ಬಾಲಿಶವೆಂದು ತೋರುತ್ತದೆ. ಯಾಕೆಂದರೆ ಅವು 'ಇರುವುದೆಲ್ಲವ ಬಿಟ್ಟು' 'ಇರದುದರೆಡೆಗೆ' ತುಡಿಯುತ್ತವೆ. ಯಾವುದೇ 'ರಚನೆ'ಗೆ (ಕನ್‌ಸ್ಟ್ರಕ್ಟ್) ಬಹುಮುಖಿಯಾದ, ಚಲನಶೀಲವಾದ, ಓದುಗನಿಂದಲೇ ಮೂಡಿಬರುವ ಅರ್ಥಗಳು ಇರುತ್ತವೆ ಎನ್ನುವ ತಿಳಿವಳಿಕೆಯು ವಿಮರ್ಶಕನಿಗೆ ನಿಜವಾಗಿಯೂ ತೆರೆದ ಮನಸ್ಸು ಮತ್ತು ವಿನಯಗಳನ್ನು ಕೊಡುತ್ತದೆ. ಹಾಗಿಲ್ಲದಿದ್ದರೆ ವಿನಯದ ತೋರುಗಾಣಿಕೆ ಇರುವುದೇ ವಿನಾ 'ವಿನಯ' ಇರುವುದಿಲ್ಲ. ತಾನು ಬಳಸುತ್ತಿರುವ ವಿಧಾನಗಳು ಮತ್ತು ಉಪಕರಣಗಳ ಬಗೆಗಿನ ಅತಿಯಾದ ಆತ್ಮವಿಶ್ವಾಸವೂ ಇಂತಹ ಪರಿಮಿತಿಗಳಿಗೆ ಕಾರಣ. ಯಾಕೆಂದರೆ ನವ್ಯರು ಬಳಸಿದ ಹತಾರುಗಳು ಹಲವು ವಿಮರ್ಶಾಪಂಥಗಳ ಮಿಶ್ರಣವಾಗಿತ್ತು. ಅವುಗಳನ್ನು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಬಳಸ ಹೊರಟಾಗ, ಅದರಲ್ಲಿಯೂ ಅಡಿಗರ ಕಾವ್ಯವನ್ನೇ ಒರೆಗಲ್ಲಾಗಿ ಮಾಡಿಕೊಂಡಾಗ ಸಹಜವಾಗಿಯೇ ಸಮಸ್ಯೆಗಳು ಮೂಡಿಬರುತ್ತವೆ. ಜೀವನದ ನೆಲೆಗಟ್ಟಿನಲ್ಲಿ